

ಫೋಟೊ: ಪ್ರಶಾಂತ್ ಎಚ್.ಜಿ.

ಪ್ರತಿ ವರ್ಷ ಹತ್ತು ಮತ್ತು ಹನ್ನೆರಡನೇ ತರಗತಿಗಳ ಫಲಿತಾಂಶ ಪ್ರಕಟಗೊಂಡಾಗ, ಸಮಾಜದ ದುರ್ಬಲ ವರ್ಗಗಳ ಮಕ್ಕಳ ಸಾಧನೆಯ ಸುದ್ದಿಗಳು ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತವೆ. ಕೂಲಿ ಕಾರ್ಮಿಕರ ಮಕ್ಕಳು, ಅಪ್ಪ–ಅಮ್ಮನನ್ನು ಕಳೆದುಕೊಂಡ ಮಕ್ಕಳು, ದುಡಿಮೆಯೊಂದಿಗೆ ಓದನ್ನೂ ನಿಭಾಯಿಸುವ ಮಕ್ಕಳು – ಬೆಂಕಿಯಲ್ಲಿ ಅರಳಿದ ಹೂಗಳಂಥ ಎಳೆಯರ ಸಾಧನೆಗಳು ಸಮಾಜದ ಗಮನಸೆಳೆಯುತ್ತವೆ. ಕೊಂಚ ಆಳಕ್ಕೆ ಇಳಿದು ನೋಡಿದರೆ, ಈ ಮಕ್ಕಳ ಕೌಟುಂಬಿಕ ಕಥನಗಳು ಸಾಮಾಜಿಕ ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ತೋರುಬೆರಳಿನಂತೆ ಒದಗಿಬರುತ್ತವೆ. 2023ರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಲಸೆ ಕಾರ್ಮಿಕರ ಕೆಲವು ಹೆಣ್ಣುಮಕ್ಕಳ ಬದುಕು ಬವಣೆ ಹಾಗೂ ಸಾಧನೆಯ ಕುರಿತ ಈ ಕಥನ, ನಮ್ಮ ಸುತ್ತಲಿನ ದುರ್ಬಲ ವರ್ಗಗಳ ಮಕ್ಕಳನ್ನು ಸಹಾನುಭೂತಿಯಿಂದ ನೋಡಲು ಒತ್ತಾಯಿಸುವಂತಿದೆ ಹಾಗೂ ಕಟು ಸಾಮಾಜಿಕ ವಾಸ್ತವವನ್ನು ನಮ್ಮ ಮುಂದಿಡುತ್ತಿದೆ.

■ ನೇಮಿಚಂದ್ರ